ಓಂ ಹ್ರೀಂ ಶ್ರೀಂ

# ಶ್ರೀವಾಸವಿ ಕನ್ಯಕಾ ದೇವಿ ಪುರಾಣ
# ಸಪ್ತದಶಾಧ್ಯಾಯ

ಅನಂತರ ಆ ವೈಶ್ಯಶ್ರೇಷ್ಠರು ಆಚಾರ್ಯರಾದ ಭಾಸ್ಕರಾಚಾರ್ಯರಿಗೆ ನಮಸ್ಕರಿಸಿ, ನಮ್ಮ ವೈಶ್ಯವಿವಾಹಕ್ಕೆ ಸಂಬಂಧಿಸಿದ ಆಚಾರಲಕ್ಷಣಗಳನ್ನು ತಿಳಿಸಿರೆಂದು ಕೋರಿದರು. ಆಗ ಭಾಸ್ಕರಾಚಾರ್ಯರು ಸಂತೋಷಿಸಿ ಶಿಷ್ಯರಾದ ಬಾಲವೈಶ್ಯರನ್ನು ನೋಡಿ, ಹೇ ಬಾಲಕರೇ ! ನಿಮ್ಮ ಪೂರ್ವಜರು ಹೇಗೆ ವಿವಾಹಕ್ರಮವನ್ನಾಚರಿಸಿದರೋ ಅದೆಲ್ಲವನ್ನು ನಾನೀಗ ನಿಮಗೆ ತಿಳಿಸಿಕೊಡುತ್ತಿರುವೆನು,' ಆಲಿಸಿರಿ ಎಂದರು.

'ಪೂರ್ವದಲ್ಲಿ ಬ್ರಹ್ಮರ್ಷಿಗಳಿಂದ ವೈದೋಕ್ತವಿಧಿಯನ್ನು ಅನುಸರಿಸಿ ಉಕ್ತವಾದಂತೆ ಪಂಚಾಹ್ನಿಕವಾಗಿ ವಿವಾಹವನ್ನು ಆಚರಿಸಬೇಕು. ಆ ಬಳಿಕ ವೈಶ್ಯವರ್ಣದವರು ಆಚರಿಸಬೇಕಾದ ಕೆಲವು ಶಿಷ್ಟಾಚಾರಗಳನ್ನು ಸಾವಧಾನಚಿತ್ತರಾಗಿ ಕೇಳಿರಿ,'ಎಂದು ಹೀಗೆ ಹೇಳತೊಡಗಿದರು.

### ಭಾಸ್ಕರಾಚಾರ್ಯರು ವೈಶ್ಯರ ವಿವಾಹ ವಿಧಾನವನ್ನು ವಿವರಿಸುವುದು

'ಶಿಷ್ಯವರರೇ ! ಕೈಲಾಸವಾಸಿಗಳಾಗಿದ್ದ ನಿಮ್ಮ ಪೂರ್ವವೈಶ್ಯರು ಸ್ವಕುಲ ಕನ್ಯಕೆಯ ವಿವಾಹ ವಿಧಾನವನ್ನು ಕುರಿತು ಆಲೋಚಿಸಿದ್ದರು. ಆ ವಿವಾಹ ವಿಧಿಯನ್ನು ಅನುಸರಿಸಿಯೇ ವೈಶ್ಯವರ್ಣದಲ್ಲಿ ವಿವಾಹಗಳು ನಡೆಯಬೇಕಾಗಿವೆ. ಇಂದ್ರನನ್ನು, ಅಗ್ನಿಯನ್ನು ವರುಣ ನನ್ನು ಕುಬೇರನನ್ನು ಚಂದ್ರನನ್ನು ಸ್ತಂಭರೂಪಗಳಾಗಿ ಪ್ರತಿಷ್ಠಿಸಿ ಆ ಪಂಚದೇವತಾ ಪ್ರತೀಕಸ್ತಂಭಸಹಿತ ಮಂಟಪವನ್ನು ರಚಿಸಿ, ಆ ಮಂಟಪ ವೇದಿಕೆಯ ಮೇಲೆ ಪೂರ್ವಾಭಿಮುಖವಾಗಿ ಈ ಶುಭ ಕಾರ್ಯವು ನಡೆಯಬೇಕು. ವೈದೋಕ್ತವಿಧಿಯಲ್ಲಿ ಸೂತ್ರಕಾರರು ಹೇಳಿದ ವಿಧಾನವನ್ನು

ಅನುಸರಿಸಿ ವೈಶ್ಯರು ಕೂಡ 5 ದಿನಗಳು ವಿವಾಹತ್ರತುವನ್ನು ಆಚರಿಸಬೇಕು. ಈ ವೈಶ್ಯರಿಗೆ ವಿವಾಹ ಕಾರ್ಯಕ್ರಮದ ಜೊತೆಗೆ ಆಚರಿಸಬೇಕಾದ ವಿಶೇಷಕಾರ್ಯಕ್ರಮವನ್ನು ವಿಶದವಾಗಿಕೇಳಿರಿ.

ಪ್ರಥಮವಾಗಿ **ಮೊದಲನೆಯದಿನ :** ಗಂಗಾ ಪೂಜೆಯನ್ನು ಆಚರಿಸಬೇಕು. ಅನಂತರ ಸಾಯಂ ಪ್ರತಃಕಾಲಗಳಲ್ಲಿ ವೈಶ್ಯರು ಔಪಾಸನೆಯನ್ನು ಅಗ್ನಿಕಾರ್ಯವನ್ನು ಮಾಡಬೇಕು.

**ಎರಡನೆಯದಿನ :** ಸಕಲಪಾಪಪರಿಹಾರಕ್ಕಾಗಿ ಸಮಸ್ತದೇವತೆಗಳನ್ನು ಯಥಾಶಕ್ತಿ ಪೂಜಿಸಬೇಕು ಅನಂತರ ವಧೂವರರ ಭೋಗಭಾಗ್ಯಾಭಿವೃದ್ಧಿಗಾಗಿ ಮಂಗಳವಾದ್ಯಗಳ ಸಮೇತ ಗ್ರಾಮದ ಹೊರವಲಯಕ್ಕೆ ಹೋಗಿ 2 ಕಲಶಗಳಲ್ಲಿ 32 ಅರಿಶಿನ ಮುದ್ದೆಗಳ ನ್ನಿರಿಸಿ ಕಲಶಗಳನ್ನು ಬೇರೆಬೇರೆಯಾಗಿ ಪೂಜಿಸಬೇಕು. **ಮೂರನೆಯ ದಿನ :** ವೈಶ್ಯೋತ್ತಮರು ಗೋತ್ರಪೂಜೆಯನ್ನು ಮಾಡಬೇಕು. ನಾಲ್ಕನೆಯ ದಿನ : ವಧೂವರರು ರಾತ್ರಿಯ ಮೊದಲನೆಯ ಯಾಮದಲ್ಲಿ ಕಾಮಧೇನು ಪೂಜೆಯನ್ನು ಮಾಡಬೇಕು. ವೈಶ್ಯರ ಪ್ರಧಾನ ವೃತ್ತಿಗಳಲ್ಲಿ ಗೋಪರಿಪಾಲನೆಯೂ ಒಂದು. ಗೋಮತಗಳನ್ನು ನೆಲೆನಿಲ್ಲಿಸಿ ಗೋಪೋಷಕರಾಗಿ ಗೋಮತರು **(ಕೋಮಠರು)** ಎಂಬ ಹೆಸರು ಹೊಂದಿದ ವೈಶ್ಯರಿಗೆ ಕಾಮಧೇನುವು ಮಾತೆಯಾಗಿ ವಿರಾಜಿಸುತ್ತಿದೆ. ಕೈಲಾಸದಿಂದ ಭೂಲೋಕಕ್ಕೆ ಮಹಾಪ್ರಸ್ಥನ ಮಾಡಿದ ನಿಮ್ಮ ಪೂರ್ವಜರು ಗೋಗರ್ಭಪ್ರದೇಶದಲ್ಲಿ ಕೊಂಚಕಾಲ ವಾಸಮಾಡಿ ಗೋಕರ್ಣಕ್ಷೇತ್ರದ ದ್ವಾರಾ ಭೂಮಿಯಲ್ಲಿ ಅವತರಿಸಿದರು. ಅವರು ಸರ್ವದೇವತಾ ಸ್ವರೂಪಿಣಿಯಾದ ಕಾಮಧೇನುವಿಗೆ ಘೃತ, ಕ್ಷೀರ, ಶರ್ಕರ ನಾರಿಕೇಳ ಫಲಗಳಿಂದಲೂ, ಏಲಕ್ಕಿಗಳಿಂದ ಕೂಡಿದ ಅಕ್ಕಿಹಿಟ್ಟನ್ನು ನೈವೇದ್ಯಮಾಡಿ ಅದನ್ನು ಪ್ರಸಾದವಾಗಿ ಸ್ವೀಕರಿಸಿ ಶಕ್ತಿವಂತರಾದರು. ಆದ್ದರಿಂದ ವಿವಾಹಸಮಯದಲ್ಲಿ ವಧೂವರರು ಕಾಮಧೇನುವಿಗೆ ಅದೇ ವಿಧದಲ್ಲಿ ನೈವೇದ್ಯವಿಟ್ಟು ಪೂಜಿಸಬೇಕು. ನಾಲ್ಕನೆಯದಿನ ರಾತ್ರಿ ಶೇಷಹೋಮವನ್ನು ಸಮಾಪ್ತಿಗೊಳಿಸಬೇಕು, ವೈಶ್ಯರು ಹಡಗುಗಳಲ್ಲಿ ವಿದೇಶವ್ಯಾಪಾರ ಮಾಡುವುದರಲ್ಲಿ ಸುಪ್ರಸಿದ್ಧರು. ಆದ್ದರಿಂದ ವೈಶ್ಯರಿಗೆ ನಾವೆಯು ಪೂಜನೀಯವಾದುದು. ಆದ್ದರಿಂದ ವಿವಾಹದ ಶುಭ ಸಂದರ್ಭದಲ್ಲಿ **ಐದನೆಯ ದಿನ :** ವೈಶ್ಯರು ನೌಕಾಸಮರ್ಚನೆಯನ್ನು ಮಾಡಬೇಕು. **ಆರನೆಯ ದಿನ :** ಪಂಚದೇವತಾಪ್ರತೀಕ ಸ್ತಂಭಗಳೊಡನೆ ವಿರಾಜಿಸುವ ಕಲ್ಯಾಣವೇದಿಕೆಯ ಮಧ್ಯದಲ್ಲಿ

ಪರಾಶಕ್ತಿಸ್ವರೂಪಿಣಿಯಾದ ಶ್ರೀವಾಸವಿ ಕನ್ಯಕಾ ಪರಾಮೇಶ್ವರಿ ದೇವಿಯ ಕಲಶಗಳನ್ನು ಸ್ಥಾಪಿಸಿ ಏಳನೆಯ ದಿನ : ನಂದೀಶ್ವರಾರ್ಚನೆ ಮಾಡಬೇಕು. ಆ ಬಳಿಕ ಗುರುವಿನಾಜ್ಞೆಯಿಂದ ಕಂಕಣವಿಸರ್ಜನೆ ಮಾಡಿ ವಸ್ತ್ರಭೂಷಣಗಳನ್ನು ಧನಧಾನ್ಯಗಳನ್ನು ಕುಲಗುರುವಿಗೆ ಸಮರ್ಪಿಸಿ ಸಂತೋಷಗೊಳಿಸ ಬೇಕು. ಅನಂತರ ವಧುವಿನೊಡಗೂಡಿ ವರನು ಗೃಹಪ್ರವೇಶವನ್ನು ಮಾಡಬೇಕು ಹೀಗೆ ವಿಶೇಷ ಕಾರ್ಯಕ್ರಮಗಳಿಂದ ಕೂಡಿ ವೈಶ್ಯರಿಗೆ ವಿವಾಹವು ಏಳು ದಿನಗಳ ಕ್ರಮವಾಯಿತು. ವಿವಾಹಕ್ರಮ ದಿನಗಳಾದ ಆ ಏಳು ದಿನಗಳಲ್ಲಿ ಏಕಭುಕ್ತರಾಗಿ ಅಂದರೆ ಒಂದು ಹೊತ್ತು ಆಹಾರ ಸ್ವೀಕರಿಸುವವರಾಗಿ ಸಾಯಂ ಸಮಯಗಳಲ್ಲಿ ಅರಿಶಿನಕುಂಕುಮಗಳಿಂದ ಪರಿಮಳಸೂಸುವ ಸಾಲಂಕೃತ ಕಲಶಗಳಲ್ಲಿ ಪರಾಶಕ್ತಿಸ್ವರೂಪಿಣಿಯಾದ ಕನ್ಯಕಾದೇವಿಯನ್ನು ಆವಾಹನೆ ಮಾಡಿ ದೇವೀವ್ರತ ಪೂಜೆಯನ್ನು ಮಾಡಬೇಕು. ಇದು ಪ್ರಾಚೀನಕಾಲದಲ್ಲಿ ನಿಮ್ಮ ಪೂರ್ವಜರು ಆಚರಿಸಿದ ವಿವಾಹಕ್ರಮ ವಿಧಾನವು. ಪರಿಸ್ಥಿತಿಗಳ ಅನಾನುಕೂಲದಿಂದ ಈ ವಿವಾಹಕ್ರತುವನ್ನು ಮೇಲೆ ಹೇಳಿದ ಕ್ರಮವನ್ನು ಬಿಡದೆ, 3 ದಿನಗಳ್ಲಾಗಲೀ, ಕಡೆಗೆ 1 ದಿನದಲ್ಲಾಗಲೀ ಆಚರಿಸಬೇಕು, ಎಂದು ಆಚಾರ್ಯರು ಹೇಳಿದ ನಂತರ ಆ ಸಭೆಯಲ್ಲಿ ವಿರೂಪಾಕ್ಷನು ಭಾಸ್ಕರಾಚಾರ್ಯರೊಡನೆ, 'ಗುರುದೇವಾ ! ನಮ್ಮ ತಂದೆ ಬಂಧುಸಮೂಹವನ್ನೆಲ್ಲ ಕರೆಸಿ, ಅವರನ್ನು ಪ್ರೇರೇಪಿಸಿ, ಬಲುಭಯಂಕರವಾದ ಅಗ್ನಿಯಲ್ಲಿ ಅವರೊಡಗೂಡಿ ಪ್ರವೇಶಿಸಿದರು. ತಂದೆತಾಯಿಗಳ ವಿಯೋಗದಿಂದ ನಾನು ದುಃಖಿಸುತ್ತಿರು ವಂತೆಯೇ ಮಿಕ್ಕೆಲ್ಲರೂ ತಮ್ಮ ತಮ್ಮ ಮಾತಾಪಿತೃಗಳನ್ನು ಕಳೆದುಕೊಂಡು ಅತೀವವಾಗಿ ದುಃಖಸಮುದ್ರದಲ್ಲಿ ಮುಳುಗಿರುವರು, ಅವರಿಗೆ ದುಃಖೋಪಶಮನ ಮಾಡುವುದಕ್ಕಾಗಿ ನಾನೇನು ಮಾಡಬೇಕಾಗಿದೆ ? ದಯೆಮಾಡಿ ತಿಳಿಸಿಕೊಡಿ, ಎಂದು ಪ್ರಾರ್ಥಿಸಿದನು. ಆಗ ಭಾಸ್ಕರಾಚಾರ್ಯರು ಶಿಷ್ಯನನ್ನು ನೋಡಿ,'ಹೇ ಮಹಾರಾಜಾ ! ಪರಂಧಾಮವನ್ನು ಹೊಂದಿನ ಪಿತೃಗಳನ್ನು ಕುರಿತು ನೀನು ದುಃಖಸಬಾರದು, ಅಗ್ನಿಯಲ್ಲಿ ಪ್ರವೇಶಿಸಿದ ನಿನ್ನ ಬಂಧುಗಳ ಮಕ್ಕಳನ್ನುಕರೆಸಿ, ಅವರನ್ನು ಸಾಂತ್ವನಗೊಳಿಸಿ ಅವರ ಕೋರಿಕೆಗಳನ್ನು ತೀರಿಸಿ ಅವರ ದುಃಖವನ್ನು ಉಪಶಮನಗೊಳಿಸು,' ಎಂದು ಬೋಧಿಸಿದರು. ಈ ರೀತಿಯಾಗಿ ಆ ದಿನದ ಸಭೆಯು ಮುಕ್ತಾಯಗೊಂಡಿತು.

## ವೈಶ್ಯಸಮಾರಾಧನೆಯ ವರ್ಣನೆ

ಮಾರನೆಯದಿನ ಉದಯಕಾಲದಲ್ಲಿ ವಿರೂಪಾಕ್ಷಶ್ರೇಷ್ಠಿಯು ತನ್ನ ತಂದೆಯೊಡನೆ ಅಗ್ನಿಪ್ರವೇಶ ಮಾಡಿದ ಬಂಧುಜನರ ಮಕ್ಕಳನ್ನೆಲ್ಲ ನಗರೇಶ್ವರಾಲಯಕ್ಕೆ ಕರೆಸಿ, ಅವರ ಜನನೀಜನಕರು ಮಾಡಿದ ಮಹಾತ್ಯಾಗವನ್ನು ವಿಶೇಷವಾಗಿ ಪ್ರಶಂಸಿಸಿ, ಅನೇಕ ಬಗೆಯ ಸಾಂತ್ವನ ನುಡಿಗಳನ್ನಾಡಿ ಅವರನ್ನೆಲ್ಲ ಸಕುಟುಂಬಸಮೇತರಾಗಿ ತನ್ನ ಮಹಲಿಗೆ ಭೋಜನಕ್ಕೆ ಬನ್ನಿರೆಂದು ಅಹ್ವಾನಿಸಿದನು. ವಿರೂಪಾಕ್ಷನ ಆಹ್ವಾನದ ಮೇರೆಗೆ ಮಾರನೆಯ ದಿನ ಬಂಧುಮಿತ್ರ ಜನರೆಲ್ಲರು ರಥ, ಗಜ, ಅಶ್ವಾದಿ ವಾಹನಗಳನ್ನು ಅಧಿರೋಹಿಸಿ ವೈಶ್ಯರಾಜನಾದ ವಿರೂಪಾಕ್ಷನ ಭವನಕ್ಕೆ ಆಗಮಿಸಿದರು. ನಾಲ್ಕು ಸಾವಿರ (4,000) ಚದರಡಿಗಳ ವಿಸ್ತೀರ್ಣ ಹೊಂದಿ, ಮಣಿಖಚಿತವಾದ ಸೋಪಾನಗಳನ್ನು ಹೊಂದಿ ಸ್ಫಟಿಕಸ್ತಂಭಗಳಿಂದ ಶೋಭಿಸುವ, ನವರತ್ನ ಖಚಿತವಾದ ಸೋಪಾನಗಳಿಂದ ಪ್ರಕಾಶಿಸುವ, ಮೃದುವಾದ ರತ್ನಕಂಬಳಿಗಳನ್ನು ಹಾಸಿದ ನೆಲದಿಂದ ಕೂಡಿ, ಸುಗಂಧ ಧೂಪಗಳಿಂದ ಪರಿಮಳ ಬೀರುವಮ ನವನಿಧಿಗಳಿಂದ ತುಂಬಿ ಕುಬೇರನ ಗೃಹಕ್ಕೆ ಸಮಾನವಾಗಿದ್ದ, ವಿರೂಪಾಕ್ಷ ಭೂಪಾಲನ ಪ್ರಾಸಾದದಲ್ಲಿ ನೂರಾರು ಪಂಕ್ತಿಗಳಲ್ಲಿ ಭೋಜನಕ್ಕೆ ಕುಳಿತಿದ್ದ ವೈಶ್ಯವೃಂದವು 100 ಸಾವಿರ ಸಂಖ್ಯೆಯಲ್ಲಿ ಬೆಳಗಿತು. ಪಂಚಭಕ್ಷ್ಯ ಪರಮಾನ್ನಗಳಿಂದ ಹಲವು ಬಗೆಯ ತಿನಿಸುಗಳಿಂದ ಕೂಡಿದ ದಿವ್ಯ ಭೋಜನವನ್ನು ಸಾವಿರಾರು ಜನರು ಬಡಿಸುತ್ತಿರಲು ವಿರೂಪಾಕ್ಷನು ಪಂಕ್ತಿಗಳ ಮಧ್ಯೆ ಓಡಾಡುತ್ತ ಕುಳಿತವರಿಗೆ ಉಪಚಾರ ಮಾಡತೊಡಗಿದನು. **ಆಗ ಆ ವೈಶ್ಯರೆಲ್ಲರೂ ಚೆನ್ನಾಗಿ ಆತಿಥ್ಯವನ್ನು ಸ್ವೀಕರಿಸಿ, ಅಂದು ಸೈನ್ಯಸಮೇತನಾಗಿ**

**ಆಗಮಿಸಿದ ಭರತನಿಗೆ ಭರದ್ವಾಜಮಹರ್ಷಿ ನೀಡಿದ ಆತಿಥ್ಯದಂತೆ ಇಂದು ಈ ಮೃಷ್ಟಾನ್ನ ಭೋಜನವಿದೆಯೆಂದು ಸಂತುಷ್ಟಚಿತ್ತರಾಗಿ ಸಾವಿರಬಾಯಿಗಳಿಂದ ವಿರೂಪಾಕ್ಷನನ್ನು ಸುತ್ತಿಸತೊಡಗಿದರು.**

ಆ ಬಳಿಕ ವಿರೂಪಾಕ್ಷ ನೃಪತಿಯು ತನ್ನ ತಂದೆಯೊಡನೆ ಆತ್ಮಾರ್ಪಣೆಮಾಡಿ ಕೊಂಡವರ ಕುಟುಂಬಗಳಿಗೆ ಕೋಟಿಕೋಟಿ ಸ್ವರ್ಣ ಮುದ್ರೆಗಳನ್ನು ಅನೇಕರತ್ನಗಳನ್ನು ವಸ್ತ್ರ ವಾಹನ ಆಭರಣಾದಿಗಳನ್ನು ಬಹುಮಾನವಾಗಿತ್ತು ಅವರನ್ನು ಸಂತೋಷಪಡಿಸಿದನು.

## ವಾಸವೀ ನವರಾತ್ರಿ ಮಹೋತ್ಸವಗಳು :

ತದನಂತರ ಚೈತ್ರ ಶುದ್ಧಪಾಡ್ಯಮಿಯಿಂದ 9 ರಾತ್ರಿಗಳು ಆ ವೈಶ್ಯೋತ್ತಮರೆಲ್ಲರೂ ಕಲೆತು ನಡೆಸಿದ ಉತ್ಸವಗಳಲ್ಲಿ ಎಲ್ಲ ವರ್ಣದವರಾದ ಪಟ್ಟಣದ ಪ್ರಜೆಗಳು ಹಗಲೆಂದು ರಾತ್ರಿಯೆಂದು ತಿಳಿದುಕೊಳ್ಳದಾದರು. ವಾಸವಿ ದೇವಿ ಪ್ರಭಾವದಿಂದ ಗೋವುಗಳು ಕೊಡಗಳಷ್ಟು ಹಾಲನ್ನೀಯತೊಡಗಿದವು. ವೃಕ್ಷಗಳು ಕಲ್ಪವೃಕ್ಷಸನಾನವಾದವು. ನದಿಗಳು ಜೇನಿನಂತೆ ಮಧುರ ಜಲವಾಹಿನಿಗಳಾದುವು. ಬಾವಿಗಳು ಅಮೃತದ ಸರೋವರಗಳಾದವು. ವೈಶ್ಯರು ಆ ಉತ್ಸವಗಳಲ್ಲಿ ಬ್ರಾಹ್ಮಣರಿಗೆ, ಋಷಿಗಳಿಗೆ, ಬಡವರಿಗೆ ಬಹುಪ್ರಕಾರವಾದ ಭೂರಿದಾನಗಳನ್ನು ನೀಡಿದರು. ಪ್ರತಿದಿನವು ಭೋಜನಮಾಡುತ್ತಿದ್ದ ನೂರು ಸಾವಿರ ಬಂಧುಮಿತ್ರ ಪರಿವಾರದ ಜನರ ಸಂಖ್ಯೆಯನ್ನು ನೋಡಿ ವಿರೂಪಾಕ್ಷನು ಉತ್ಸಾಹದಿಂದ ಹಿಗ್ಗಿದನು.

ಅನಂತರ ಸಮಸ್ತ ಪ್ರಜೆಗಳು ಬಗೆಬಗೆಯ ವಾಹನಗಳೊಡನೆ ಬಗೆಬಗೆಯ ಮಂಗಳವಾದ್ಯಗಳೊಡನೆ ನಟ ಗಾಯಕ ವೈತಾಳಿಕರೊಡಗೂಡಿ ಅತ್ಯಂತ ವೈಭವೋಪೇತವಾಗಿ ನಗರಪ್ರದಕ್ಷಿಣೆ ಮಾಡಿ ಗೌರೀನಗರೇಶ್ವರರನ್ನು, ಕೋನಕಮಲಾಜನಾರ್ದನರನ್ನು, ವಿಂಧ್ಯವಾಸಿನಿ ದೇವಿಯನ್ನು ಸಕಲೋಪಚಾರಗಳಿಂದ ಅರ್ಚಿಸಿ ವಾಸವಿ ದೇವಿಯ ಅರ್ಚಾವತಾರ ಮೂರ್ತಿಯ ಸನ್ನಿಧಿಗೆ ಸೇರಿಕೊಂಡರು.

## ಶ್ರೀವಾಸವಿ ದೇವಿ ಸಹಸ್ರನಾಮ ಸ್ತೋತ್ರ ಮಹತ್ವ

ಅರ್ಚಾವತಾರಳಾಗಿ ನೆಲೆಸಿದ ಶ್ರೀ ವಾಸವಿ ಕನ್ಯಕಾಪರಮೇಶ್ವರಿ ದೇವಿ ಸನ್ನಿಧಿಗೆ ಸೇರಿದವರೆಲ್ಲರನ್ನು ಗುರುವರೇಣ್ಯರಾದ ಭಾಸ್ಕರಾಚಾರ್ಯರು ಆ ದೇವಿಯ ವಿಶೇಷಪೂಜೆಗೆ ಸಂಸಿದ್ಧರನ್ನಾಗಿಸುತ್ತ ಹೀಗೆ ಹೇಳತೊಡಗಿದರು. 'ಹೇ ಭಕ್ತಶ್ರೇಷ್ಠರೇ ! ಶ್ರೀ ವಾಸವಿ ಕನ್ಯಕಾದೇವಿ ಸಹಸ್ರನಾಮಸ್ತೋತ್ರವು ಸರ್ವಪಾಪವಿನಾಶಕರವಾದುದು. ಪೂರ್ವದಲ್ಲಿ ಈ ದೇವಿ ಸಹಸ್ರನಾಮ ಸ್ತೋತ್ರವು ಆದಿಶೇಷ ಭಗವಂತನಿಂದ ಧರ್ಮನಂದನನಿಗೆ ಹೇಳಲ್ಪಟ್ಟಿತು. ಮತ್ತೆ ನಿಮ್ಮ ಪೂರ್ವಜನಾದ ಸಮಾಧಿಯೆಂಬ ಮಹಾತ್ಮನು ಈ ಸಹಸ್ರನಾಮ ಸ್ತೋತ್ರದಿಂದ ಆದಿ ಕನ್ಯಕಾ ಪರಮೇಶ್ರರಿಯನ್ನು ಅರ್ಚಿಸಿ ಅಮೋಘ ವರವನ್ನು ಹೊಂದಿ ಧನ್ಯನಾದನು. ಈ ಸ್ತೋತ್ರವು ನರರಿಗೆ ಆಯುರಾರೋಗ್ಯಗಳನ್ನು ಪ್ರಸಾದಿಸುವುದು. ಧನಧಾನ್ಯಾಭಿವೃದ್ಧಿ ಮಾಡುವುದು.

ದಿವ್ಯಜ್ಞಾನವನ್ನು ಉಂಟುಮಾಡುವುದು. ಪುತ್ರಪೌತ್ರಾದಿಗಳನ್ನು ಪ್ರಸಾದಿಸುವುದು. ಈ ಸಹಸ್ರನಾಮಕ್ಕೆ ಬ್ರಹ್ಮನೇ ಋಷಿಯಾಗಿ ಹೇಳಲ್ಪಟ್ಟಿರುವನು. ಇದು ಅನುಷ್ಟುಪ್ ಛಂದಸ್ಸಿನಲ್ಲಿರುವುದು. ಈ ಸಹಸ್ರನಾಮಗಳು ಶ್ರೀವಾಸವಿ ಕನ್ಯಕಾದೇವಿ ಲಕ್ಷಣಯುಕ್ತವಾಗಿ ವಿರಾಜಿಸುತ್ತಿವೆ.

ಅನೇಕ ಸಹಸ್ರ ನಾಮಗಳಲ್ಲಿ ಇವು ಸರ್ವಸಿದ್ಧಿಪ್ರದಗಳಾಗಿವೆ. ಶ್ರೀವಾಸವಿ ಕನ್ಯಕಾ ಪರಮೇಶ್ವರಿ ಆಗಮಾರ್ಚನೆಯಲ್ಲಿ ಇವು ಮಿಗಿಲಾಗಿ ಮುಖ್ಯವಾಗಿವೆ. ಈ ಸಹಸ್ರ ನಾಮಗಳನ್ನು ಪಠಿಸುವುದರಿಂದ ಶ್ರೀವಾಸವಿ ಮಾತೆ ಪ್ರೀತಳಾಗುವಂತೆ ಇತರ ನಾಮಗಳನ್ನು ಪಠಿಸುವುದರಿಂದ ಪ್ರೀತಳಾಗುವುದಿಲ್ಲ. ಶ್ರೀವಾಸವಿ ಕನ್ಯಕೆ ದೇವಿಗೆ ಪ್ರಿಯವನ್ನುಂಟು ಮಾಡಲು ಸದಾ ವಾಸವಿಯ ಸಹಸ್ರನಾಮಗಳನ್ನೇ ಪಠಿಸಬೇಕು. ಶ್ರಿವಾಸವಿಕನ್ಯಾ ಚಕ್ರರಾಜದಲ್ಲಿ ದೇವಿಯನ್ನು ನಿಲ್ಲಿಸಿ ಕುಂಕುಮದಿಂದಾಗಲೀ ಪುಷ್ಪಗಳಿಂದಾಗಲೀ ತುಳಸೀದಳಗಳಿಂದಾಗಲೀ ಸಹಸ್ರನಾಮಗಳನ್ನು ಪಠಿಸುತ್ತಾ ಪೂಜಿಸುವವರಿಗೆ ಪೆನುಗೊಂಡ ಪುರಾಧೀಶ್ವರಿಯಾದ ಶ್ರೀವಾಸವಿ ಕನ್ಯಕೆಯು ಸಮಸ್ತ ಶುಭಗಳನ್ನು ಎಸಗುವಳು. ಅನಂತಶಕ್ತಿವಂತವಾದ ಶ್ರೀವಾಸವೀ ಮಂತ್ರರಾಜವನ್ನು ಸಾಂಗವಾಗಿ ಪಠಿಸಿದಾಗ ದೊರೆಯುವ ಫಲವು ಈ ದಿವ್ಯ ಸಹಸ್ರನಾಮ ಸ್ತೋತ್ರದಿಂದಲೇ ಉಂಟಾಗಬಲ್ಲದು. ಆದ್ದರಿಂದ

ಶ್ರೀ ವಾಸವಿ ಕನ್ಯಕಾ ದೇವಿಯನ್ನು ಅರ್ಚಿಸಬೇಕು, ' ಎಂದು ತಿಳಿಸಿ ಶ್ರೀ ಭಾಸ್ಕರಾಚಾರ್ಯರು ಶ್ರೀ ವಾಸವೀ ಸಹಸ್ರನಾಮಾವಳಿಯಿಂದ ದೇವಿಯನ್ನು ಕೀರ್ತಿಸತೊಡಗಿದರು. ಆ ಸಹಸ್ರ ನಾಮವಳಿಯನ್ನು ಅನುಸರಿಸಿ ವಿರೂಪಾಕ್ಷಾದಿ ವೈಶ್ಯರು ಶ್ರೀ ವಾಸವಿದೇವಿ ಅರ್ಚಾವತಾರ ಮೂರ್ತಿಯನ್ನು ಕುಂಕುಮದಿಂದ ಪೂಜಿಸಿ ಕೀರ್ತನೆಗಳಿಂದ ಸ್ತುತಿಸಿದರು.

ಆ ದಿವ್ಯ ಸಹಸ್ರನಾಮ ಸ್ತೋತ್ರದಿಂದಲೂ, ಭಕ್ತಿಪೂರ್ಣವಾದ ಸ್ತುತಿ ಕೀರ್ತನೆಗಳಿಂದಲೂ ಸಂಪ್ರೀತಳಾದ ವಾಸವಿಕನ್ಯಕಾದೇವಿಯು ಕೋಟಿ ಸೂರ್ಯ ಪ್ರಭಾಸಮಾನಳಾಗಿ ಅವರಿಗೆ ಪ್ರತ್ಯಕ್ಷಳಾದಳು. ಆ ಜಗನ್ಮಾತೆಯ ದಿವ್ಯದರ್ಶನದಿಂದ ಎಲ್ಲರೂ ಪರಮಾನಂದಭರಿತರಾದರು.

ಆ ದೇವದೇವೇಶ್ವರಿಯನ್ನು ದರ್ಶಿಸಿ ಭಕ್ತಿಯಿಂದ ತನ್ಮಯರಾಗಿ **ಅವ್ಯಕ್ತ ಪರಬ್ರಹ್ಮ ಸ್ವರೂಪಿಣಿಯಾದ ಹೇ ಆದಿಶಕ್ತಿ ! ಮಂಗಳಸ್ವರೂಪಳಾದ ಹೇ ದೇವಿ !** ದುಷ್ಟದಾನವರನ್ನು

ನಾಶಗೊಳಿಸುವ **ಓ ಭದ್ರಕಾಳಿಕೆ !** ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವ **ಹೇ ನಾರಾಯಣಿ !** ಸರ್ವ ಲೋಕಗಳನ್ನು ಭ್ರಾಂತಿಗೊಳಿಸುವ **ಓ ಮಹಾಮಾಯೇ !** ವಾಸುದೇನ ಸಹೋದರಿಯಾದ **ಹೇ ಕನ್ಯಕೇ !** ದುರ್ಗತಿಹಾರಿಣಿಯಾದ **ಹೇ ದುರ್ಗಾದೇವಿ !** ನಿಜಭಕ್ತರಿಗೆ ಸದಾ ಜಯವನ್ನುಂಟುಮಾಡುವ **ಹೇ ವಿಜಯಾ ! ರಸೋ ವೈ ಸಃ** ಎಂದು ಹೇಳಲ್ಪಟ್ಟ ರಸಸ್ವರೂಪ ಪರಮಾತ್ಮನೆಂಬ ಮಕರಂದವನ್ನು ಗರ್ಭದಲ್ಲಿ ಅಡಗಿಸಿಕೊಂಡಿರುವ **ಹೇ ಕುಮುದಾದೇವಿ !** ಸರ್ವಕರ್ಷಣ ಶಕ್ತಿಸ್ವರೂಪಳಾಗಿ ಸೃಷ್ಟಿಗೆ ಮೂಲವಾದ ತಮಃಪ್ರತಿಕ ನೀಲವರ್ಣದ **ಹೇ ಕೃಷ್ಣೇ !** ಸರ್ವವ್ಯಾಪಕವಾದ ವಿಷ್ಣುಸ್ವರೂಪಳಾದ **ಹೇ ವೈಷ್ಣವೀ ದೇವಿ !** ಶುಂಭನಿಶುಂಭಾದಿ ರಕ್ಕಸರನ್ನು ಸದೆಬಡಿದ **ಹೇ ಚಂಡಿಕೇ !** ಈಶ್ವರ ಶಕ್ತಿಯಾದ **ಹೇ ಈಶಾನೀ !** ಸಮಸ್ತದಲ್ಲಿ ನೀನು ವಾಸಿಸುತ್ತ ನಿನ್ನಲ್ಲಿ ಸಮಸ್ತವೂ ವಾಸಿಸುವಂತೆ ಮಾಡಿಕೊಂಡಿರುವ **ಹೇ ವಾಸವಿ ದೇವಿ !** ಬ್ರಹ್ಮಶಕ್ತಿಯಾದ **ಹೇ ಶಾರದಾ ದೇವಿ !** ಭಂಡಾಸುರಾಂಶ ಸಂಭೂತನಾದ ವಿಷ್ಣುವರ್ಧನನ್ನು ಅಂತ್ಯಗೊಳಿಸಿದ **ಹೇ ಜ್ಯೇಷ್ಠಶೈಲ ಪುರೀಶ್ವರೀ ! ಪೆನುಗೊಂಡಾಧೀಶ್ವರಿ ಹೇ ಮಹಾಲಕ್ಷ್ಮೀ ಸ್ವರೂಪಿಣಿ !** ಸೃಷ್ಟಿ ಸ್ಥಿತಿ, ಲಯ ಕಾರಿಣಿಯಾದ ಆದಿಪರಾಶಕ್ತಿ !

**ಹೇ ಕನ್ಯಕಾಪರಮೇಶ್ವರೀ ದೇವಿ ! ನಿನಗೆ ಕೋಟಿಕೋಟಿ ಪ್ರಣಾಮಗಳು** ಎಂದು ಬಹುವಿಧಗಳಲ್ಲಿ ಕೀರ್ತಿಸಿ ಆ ಜಗದೀಶ್ವರಿಯ ಚರಣಕಮಲಗಳಿಗೆ ಸಾಷ್ಟಾಂಗ ದಂಡಪ್ರಣಾಮಗಳನ್ನು ಮಾಡಿದರು.

ಅವರ ಭಕ್ತಿಪ್ರಪತ್ತಿಗಳಿಗೆ ಪ್ರಸನ್ನಳಾದ ಶ್ರೀ ವಾಸವಿ ಜನನಿಯು ಕುಮಾರರೇ ! ನಿಮ್ಮ ಭಕ್ತಿಗೆ ಮೆಚ್ಚಿದೆನು. ನೀವು ಮಾಡಿದ ನನ್ನ ದಿವ್ಯ ಸಹಸ್ರನಾಮಾವಳಿ ಸ್ತೋತ್ರದಿಂದ ಸಂತುಷ್ಟಳಾದೆನು. ನಿಮಗೆ ಬೇಕಾದುದನ್ನು ಕೇಳಿರಿ. ನಿಮ್ಮ ಅಭೀಷ್ಟಗಳನ್ನು ಪೂರೈಸುವೆ ಎಂದು ಹೇಳಿ ಅನುಗ್ರಹಮಾಡಿದಳು.